# ವಯಸ್ಸು ಮೀರಿದ ಮನಸುಗಳ ಮದುವೆ

**ಮೇಘನಾ ಶೆಟ್ಟಿ**
ಝೀ ಕನ್ನಡದ
'ಜೊತೆ ಜೊತೆ'ಯ ಅನು



**◆ ಪ್ರೇಮಿಗಳ ಜೋಡಿ ಪಯಣ ಮಾಮೂಲು ಕಥೆ ಎಂದು ಅನ್ನಿಸುವುದಿಲ್ಲವೇ?**

ಇದು ಮಾಮೂಲು ಕಥೆ ಎಂದು ನನಗೆ ಅನ್ನಿಸುವುದಿಲ್ಲ. ಮಾಗಿದ ಮನಸುಗಳೆರಡರ ಸಮ್ಮಿಲನ. 'ಜೊತೆ ಜೊತೆ' ತುಂಬ ಭಿನ್ನ ಪ್ರೇಮ ಕಥೆ. ಇದು ವಯಸ್ಸುಗಳ ನಡುವೆ ಮನಸ್ಸುಗಳ ಮದುವೆ. ಇಲ್ಲಿ ಜೋಡಿಗಳಿಬ್ಬರೂ ಒಂದಾಗುವ ನಿಟ್ಟಿನಲ್ಲಿ ವಹಿಸಿದ ಶ್ರಮ ಮತ್ತು ಎದುರಿಸಿದ ಕಷ್ಟ ಎಲ್ಲವೂ ಭಿನ್ನ. ಇಬ್ಬರೂ ಒಂದಾಗಿ ಸೇರಲು ಎಷ್ಟು ಜನರ ನಿಂದನೆಯ ಮಾತುಗಳನ್ನು ಕೇಳಿರುತ್ತಾರೆ ಎನ್ನುವುದೆಲ್ಲವೂ ಈ ಪ್ರೇಮ ಕತೆಯ ಸ್ವಾರಸ್ಯದ ಸಂಗತಿ.

**◆ ವಯೋ ಅಂತರದ ದಾಂಪತ್ಯದಲ್ಲಿ ಸರಸ– ವಿರಸ ಹೇಗಿದೆ?**

ಹರೆಯದ ಹೊಸ ಜೋಡಿಗಳ ರೀತಿಯಲ್ಲೇ ಇರಬೇಕು ಎನ್ನುವ ಬಯಕೆ ಇಬ್ಬರಿಗೂ ಇರುತ್ತದೆ. ಆ ರೀತಿ ಇರಲು ಇಬ್ಬರೂ ಪ್ರಯತ್ನ ಮಾಡುತ್ತೇವೆ. ಆದರೆ ವಯೋ ಸಹಜವಾಗಿ ಭಿನ್ನತೆ ಕಾಡುತ್ತದೆ. ನಮ್ಮ ಬಗ್ಗೆ ಜನ ಏನು ಅಂದುಕೊಳ್ಳುತ್ತಾರೋ ಏನೋ ಎನ್ನುವ ಅಳುಕು ನಮ್ಮ ಮನದಲ್ಲಿ ಇಣುಕುತ್ತದೆ. ನಾವು ಇಷ್ಟಪಟ್ಟು ಮದುವೆ ಆಗಿರುವುದರಿಂದ ಜಗಳ ಸ್ವಲ್ಪ ಕಡಿಮೆ. ಇಬ್ಬರೂ ನಮ್ಮಿಷ್ಟದಂತೆ ಪ್ರೀತಿಯಿಂದ ಇರುತ್ತೇವೆ. ಜೊತೆಗೆ ಇದ್ದೂ ದೂರ ಇರುತ್ತೇವೆ. ಅಂದರೆ ಅದು ಇಬ್ಬರ ಮನಸ್ಥಿತಿ ಮತ್ತು ಸಂದರ್ಭವನ್ನು ಅವಲಂಬಿಸಿರುತ್ತದೆ. ಇಬ್ಬರ ಮನಸ್ಸು ಚೆನ್ನಾಗಿದ್ದಾಗ ಇಬ್ಬರೂ ಅನೋನ್ಯವಾಗಿ ಇರುತ್ತೇವೆ. ಬೇರೆಯ ಸಂದರ್ಭದಲ್ಲಿ ನಮ್ಮ ಪಾಡಿಗೆ ನಾವು ಇರುತ್ತೇವೆ. ಈ ಎಲ್ಲದೂ ನಮ್ಮ ಮನಸ್ಥಿತಿಯ ಮೇಲೆ ನಿಂತಿರುತ್ತದೆ.

**◆ ಮೊದಲ ದಿನ ಕ್ಯಾಮೆರಾ ಕಣ್ಣು ನಿಮ್ಮನ್ನೇ ನೋಡುವಾಗ ಹೇಗೆನಿಸಿತು?**

ಇದು ನನ್ನ ಮೊದಲ ಧಾರಾವಾಹಿ. ನನ್ನನ್ನು ಕ್ಯಾಮೆರಾ ನೋಡುತ್ತಿದೆ ಎನ್ನುವ ಅನುಭವವೇ ಆಗಲಿಲ್ಲ. ಚಿತ್ರೀಕರಣದ ಮೊದಲ ದಿನ ಭಯ ಎಂದು ಅನ್ನಿಸಲಿಲ್ಲ. ನಿರ್ದೇಶಕರು ಮೊದಲೇ ನನಗೆ ತರಬೇತಿ ನೀಡಿದ್ದರು. ನನ್ನ ಸಹನಟರ ಸಹಕಾರ ತುಂಬ ಚೆನ್ನಾಗಿತ್ತು. ಹಾಗಾಗಿ ಅಂದು ಕ್ಯಾಮೆರಾ ಎದುರು ನಾನು ನಟಿಸುತ್ತಿದ್ದೇನೆ ಎಂದು ಅನ್ನಿಸಲಿಲ್ಲ. ಸಹಜವಾಗಿ ಗೆಳೆಯರ ಜೊತೆ ಮಾತನಾಡುತ್ತಿದ್ದೇನೆ ಎಂದೇ ಅನ್ನಿಸಿತ್ತು.

**◆ ಶಾಲೆಯ ದಿನಗಳಲ್ಲಿ ಏನಾಗಬೇಕು ಎಂಬ ಕನಸಿತ್ತು?**

ಐಎಎಸ್ ಮಾಡಲೇಬೇಕು ಎನ್ನುವ ಕನಸು ಚಿಕ್ಕವಯಸ್ಸಿನಲ್ಲಿ ನನಗಿತ್ತು. ಎಂಬಿಎ ಮುಗಿಸಿ ಇನ್ನೇನು ಯುಪಿಎಸ್‌ಸಿ ಪರೀಕ್ಷಾ ಸಿದ್ಧತೆಗೆ ತೊಡಗಬೇಕು ಎನ್ನುತ್ತಿದ್ದವಳಿಗೆ ಬಣ್ಣದ ಲೋಕ ನನ್ನನ್ನು ತನ್ನತ್ತ ಕರೆದುಕೊಂಡು ಬಂದಿದೆ. ಈ ಬಗ್ಗೆ ಯಾವ ಬೇಸರವೂ ಇಲ್ಲ. ಯಾವುದು ಆಗಬೇಕೋ ಅದೇ ಆಗುತ್ತದೆ ಎಂದು ಲೋಕರೂಢಿ ಮಾತು ಇದೆ. ಆ ಮಾತು ನನಗೂ ಅನ್ವಯ ಆಗಿರಬಹುದು. ನನಗೆ ಸಿಕ್ಕಿರುವುದೇ ಪುಣ್ಯದ ಕೆಲಸ ಎಂದು ಮುಂದುವರಿಸಿಕೊಂಡು ಹೋಗುತ್ತೇನೆ. ಹಾಗೆಂದು ನನ್ನ ಕನಸಿನ ಸಿವಿಲ್ ಸರ್ವೀಸ್ ಪರೀಕ್ಷೆಯಿಂದ ವಿಮುಖ ಆಗುವುದಿಲ್ಲ. ಅದಕ್ಕೂ ನನ್ನ ಪ್ರಯತ್ನ ಇದ್ದೇ ಇದೆ. ಬಿಡುವಿನ ವೇಳೆಯನ್ನು ಅದಕ್ಕೆ ಬಳಸುತ್ತೇನೆ. ಮುಂದೆ ಏನಾಗುತ್ತೋ ನೋಡೋಣ.

**◆ ನಿಮ್ಮ ಭವಿಷ್ಯ ಹೇಗಿರಬೇಕು ಎಂದು ಈಗ ಅಂದುಕೊಂಡಿದ್ದೀರಿ?**

ಭವಿಷ್ಯದ ಬಗ್ಗೆ ಸದ್ಯ ಯಾವ ಯೋಚನೆಯನ್ನೂ ಮಾಡಿಲ್ಲ. ವೀಕ್ಷಕರು ಮೆಚ್ಚಿ ಬೆಂಬಲಿಸಿದರೆ ಸಾಕು. ಈಗ ವ್ಯಕ್ತವಾಗುತ್ತಿರುವ ಜನರ ಮೆಚ್ಚುಗೆ ನನಗೆ ಖುಷಿಯನ್ನು ಕೊಟ್ಟಿದೆ. ಪ್ರಸ್ತುತ ಈ ನನ್ನ ಕೆಲಸವನ್ನು ಸರಿಯಾಗಿ ನಿಭಾಯಿಸಬೇಕು. ಈ ಮೂಲಕ ಜನರ ಮನಸ್ಸನ್ನು ಗೆಲ್ಲಬೇಕು ಎನ್ನುವುದು ನಮ್ಮ ತಂಡದ ಅಭಿಲಾಷೆ.

**◆ ನಿಮ್ಮ ಪರಿಚಯನ್ನು ಮಾಡಿಕೊಡಿ...**

ಮೂಲತಃ ಮಂಗಳೂರು ಹುಡುಗಿ. ನಮ್ಮೂರು ಕರಾವಳಿ ಅಂದ ಮೇಲೆ ಮೀನೂಟ ನನಗೆ ತುಂಬ ಇಷ್ಟ. ತಾಯಿ ರುಕ್ಮಿಣಿ, ತಂದೆ: ಸುರೇಶ್. ಅವರು ಸ್ವಂತ ಉದ್ಯಮವನ್ನು ಹೊಂದಿದ್ದಾರೆ. ನಾವು ಬೆಂಗಳೂರಿನಲ್ಲಿಯೇ ನೆಲೆಸಿದ್ದೇವೆ. ಹವ್ಯಾಸ ಎಂದು ಹೇಳುವುದಾದರೆ ಪುಸ್ತಕ ಓದುತ್ತೇನೆ. ಈಜಾಡುವುದೂ ನನಗೆ ಇಷ್ಟ.

■ **ರಾಘವೇಂದ್ರ ಕೆ.**